# 15ಕ್ಕೆ ಎನ್ಐಟಿಕೆ 22ನೇ ಘಟಿಕೋತ್ಸವ

ಸಂ.ಕ.ಸಮಾಚಾರ, ಮಂಗಳೂರು

ಸುರತ್ಕಲ್ ಎನ್ಐಟಿಕೆ ಸಂಸ್ಥೆಯ 23ನೇ ಘಟಿಕೋತ್ಸವ ನ.15ರಂದು ಮಧ್ಯಾಹ್ನ 2.30ಕ್ಕೆ ಎನ್ಐಟಿಕೆಯ ಹೊಸ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಉಪ ನಿರ್ದೇಶಕ ಸುಭಾಶ್ ಸಿ. ಯಾರಗಲ್, ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಬೆಂಗಳೂರಿನ ವೋಲ್ವೊ ಗ್ರೂಪ್ ಇಂಡಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕಮಲ್ ಬಾಲಿ ಅವರು ಭಾಗವಹಿಸಲಿದ್ದು, ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಹೈದರಾಬಾದ್‌ನ ಸೀಯಾಂಟ್ ಕಂಪನಿಯ ಸ್ಥಾಪಕ ಅಧ್ಯಕ್ಷ ಹಾಗೂ ಎನ್ಐಟಿಕೆ ಆಡಳಿತ ಮಂಡಳಿಯ ಅಧ್ಯಕ್ಷ ಡಾ.ಬಿ.ವಿ. ಆರ್.ಮೋಹನ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಈ ವರ್ಷ 935 ಬಿಟೆಕ್, 641 ಎಂ.ಟೆಕ್, 23 ಎಂ.ಟೆಕ್ (ಸಂಶೋಧನೆ), 66 ಎಂಸಿಎ, 69 ಎಂ.ಬಿ.ಎ., 68 ಎಂಎಸ್ಸಿ ಮತ್ತು 193 ಪಿಎಚ್.ಡಿ ಪದವಿ ವಿದ್ಯಾರ್ಥಿಗಳು ಸೇರಿದಂತೆ 1995 ಮಂದಿಗೆ ಪದವಿ ಪ್ರದಾನ ನಡೆಯಲಿದೆ. ಈ ಪೈಕಿ 283 ವಿದ್ಯಾರ್ಥಿಗಳಿ ಬಿ.ಟೆಕ್ ಮೈನರ್ ಪದವಿ ಪಡೆಯಲಿದ್ದಾರೆ ಮತ್ತು 10 ವಿದ್ಯಾರ್ಥಿಗಳಿಗೆ ಬಿ.ಟೆಕ್ ಹಾನರ್ಸ್ ಪದವಿ ಪಡೆಯಲಿದ್ದಾರೆ. ಪಿಎಚ್.ಡಿ ಪದವಿ ಪಡೆಯುವವರಲ್ಲಿ 57 ಮಂದಿ ಸಂಶೋಧನ ವಿದ್ಯಾರ್ಥಿನಿಯರು ಮತ್ತು 136 ಮಂದಿ ಸಂಶೋಧನ ವಿದ್ಯಾರ್ಥಿಗಳು. ಶೈಕ್ಷಣಿಕ ಸಾಧನೆಯನ್ನು ಗುರುತಿಸಿ, 10 ಬಿ.ಟೆಕ್ ವಿದ್ಯಾರ್ಥಿಗಳು, ಅತ್ಯಧಿಕ ಶ್ರೇಣಿಗಳನ್ನು (ಸಿಜಿಪಿಎ) ಪಡೆದಿರುವ 31 ಸ್ನಾತಕೋತ್ತರ ವಿದ್ಯಾರ್ಥಿಗಳು ಸಂಸ್ಥೆಯ ಚಿನ್ನದ ಪದಕ ಮತ್ತು ಇತರರು ಪ್ರಾಯೋಜಿಸಿದ ಚಿನ್ನದ ಪದಕಗಳನ್ನು ಪಡೆಯಲಿದ್ದಾರೆ ಎಂದರು.

ಎನ್ಐಟಿಕೆ ಸಂಸ್ಥೆಯ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಫೈಲ್‌ಗಳು ಕಂಪ್ಯೂಟರ್‌ನಿಂದ ಡಿಲೀಟ್ ಆಗಿರುವ ಪ್ರಕರಣಲ್ಲಿ ತನಿಖೆ ಅಂತಿಮ ಹಂತಕ್ಕೆ ಬಂದಿದೆ. ಉನ್ನತ ಅಧಿಕಾರಿಗಳ ತನಿಖಾ ತಂಡದಿಂದ ತನಿಖೆ ನಡೆಯುತ್ತಿದ್ದು, ಸಂಬಂಧಪಟ್ಟ ಸಿಬ್ಬಂದಿಯನ್ನು ಈಗಾಗಲೇ ವಿಚಾರಣೆ ಒಳಪಡಿಸಲಾಗಿದೆ. ತನಿಖಾಧಿಕಾರಿಗಳು ಶೀಘ್ರದಲ್ಲಿ ತನಿಖಾ ವರದಿಯನ್ನು ಸಂಸ್ಥೆಯ ನಿರ್ದೇಶಕರಿಗೆ ಸಲ್ಲಿಸಲಿದೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶೈಕ್ಷಣಿಕ ಡೀನ್ ಡಾ.ದ್ವಾರಕೀಶ್, ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಸೈಕತ್ ದತ್ತಾ ಉಪಸ್ಥಿತರಿದ್ದರು.




Samyuktha Karnataka, Date: 12/11/25, p.03